S-3-3 2017-18 C-3 | 12


ಶ್ರೀ ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿಯ

ದೂರವಾಣಿ : 0836-2436182

ನ್ಯಾಕನಿಂದ B ಮಾನ್ಯತೆ ಪಡೆದ

ಶ್ರೀಮತಿ ಕಲ್ಲವ್ವ ಶಿವಪ್ಪಣ್ಣ ಜಿಗಳೂರ ಕಲಾ ಹಾಗೂ

ಡಾ. (ಶ್ರೀಮತಿ) ಸುಶೀಲಾ ಮುರಿಗೆಪ್ಪ ಶೇಷಗಿರಿ ವಾಣಿಜ್ಯ

ಮಹಿಳಾ ಮಹಾವಿದ್ಯಾಲಯ,

ಆರ್.ಎನ್.ಶೆಟ್ಟಿ ಕ್ರೀಡಾಂಗಣದ ಹತ್ತಿರ, ಸಾಹಿತ್ಯ ಭವನದ ಹಿಂದೆ, ಧಾರವಾಡ - 580008

E-mail: shasswcd@gmail.com

Web : shasswcd.in


ನಂ.ಮಮಧಾ: 2017-18/ 25/

ದಿನಾಂಕ 10/8/2018

ಗೆ,

ರಂಗನಾಥ ಕಂಟನಕುಂಟೆ,
ಅನಿಕೇತನ ವೆಬ್ ಮ್ಯಾಗಜ್ಜಿನ್,
# 30, 1ನೇ ಕ್ರಾಸ್, ಜಿ. ಕೆ. ಡಬ್ಲ್ಯೂ ಲೇಔಟ್,
ವಿಜಯನಗರ,
ಬೆಂಗಳೂರು-10.

ವಿಷಯ : ಮುಂಗಾರು ಕಥಾ ಸ್ಪರ್ಧೆ-2 ಕಥೆ ಸ್ಪರ್ಧೆಗೆ ಬರಹ ಕಳುಹಿಸುವ ಕುರಿತು.

ಮಾನ್ಯರೆ,

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿನಿಯಾದ ಕು. ಸೋನಾ ಆರ್. ಬಡಿಗೇರ, ಬಿ. ಕಾಂ. 3 ಇವರು ಬರೆದ ಕಥೆಯನ್ನು ಕಾಲೇಜಿನ ಪರಿಚಯ ಪತ್ರ ಹಾಗೂ ಭಾವಚಿತ್ರದೊಂದಿಗೆ ಕಳುಹಿಸುತ್ತಿದ್ದೇವೆ. ಸ್ವಿಕೃತಿಯ ಬಗ್ಗೆ ತಿಳಿಸಿರಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

[signature]

ಪ್ರಾಚಾರ್ಯರು,
ಶ್ರೀ ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿಯ
ಶ್ರೀಮತಿ ಕ. ಶಿ. ಜಿಗಳೂರ ಕಲಾ ಹಾಗೂ
ಡಾ|| (ಶ್ರೀಮತಿ) ಸು. ಮು. ಶೇಷಗಿರಿ ವಾಣಿಜ್ಯ
ಮಹಿಳಾ ಮಹಾವಿದ್ಯಾಲಯ, ಧಾರವಾಡ

S.H.A.S. SAMITI'S K.S.J. ARTS & S.M.S. COMMERCE COLLEGE FOR WOMEN DHARWAD

[signature]
Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

# ಅಂತರ್ ಜೊತೆ ಜಾಲ

ಪೃಥ್ವಿಯಲ್ಲಿ ದೇವಾನು ದೇವತೆಗಳು ನೆಲೆಸಿರುವ ದೇಶ ನಮ್ಮ ಭಾರತ. ಭಾರತದಲ್ಲಿ ಸಾಫ್ಟವೇರ ರಾಜ್ಯ ಎಂದು ಹೆಸರಾಗಿರುವುದು ಕರ್ನಾಟಕ. ಈ ರಾಜ್ಯಕ್ಕೆ ಟೆಕ್ನಾಲಜಿಯಲ್ಲಿ ಮೊದಲು ಮತ್ತು ಸಾಫ್ಟವೇರ ರಾಜ್ಯ ಎನ್ನಲು ಒಂದು ಕಾರಣವಿದೆ. ಅದುವೇ ಈ ಕಥೆ ಪ್ರಾರಂಭ ಮತ್ತು ಅಂತ್ಯ. ಈ ಕಥೆಯ ನಾಯಕ ವಿರಾಟ, ಇವರ ತಾಯಿ ಸರಸ್ವತಿ, ತಂದೆ ಬ್ರಹ್ಮೇಶ ಮತ್ತೆ ಇಬ್ಬರು ಸಹೋದರಿಯರು, ಒಬ್ಬಳು ರೇವತಿ ಇನ್ನೊಬ್ಬಳು ವೃಂದಾ, ಇವನಿಗೆ ಇನ್ನು ಇಬ್ಬರು ಒಬ್ಬ ಮಾಮಾ ಜಲಂಧರ, ಅಜ್ಜ ಮಹಾರಾಜ ಇದು ವಿರಾಟ ಕುಟುಂಬ.

ನಾಯಕ ಇದ್ದ ಮೇಲೆ ನಾಯಕಿ ಇರಲೇ ಬೇಕು ಅಲ್ವಾ ನಾಯಕಿ ಹೆಸರು ಸತಿ, ಇವರ ತಾಯಿ ಪದ್ಮಾವತಿ, ತಂದೆ ಶ್ರೀನಿವಾಸ, ಇವಳ ಅಕ್ಕ ವಿಜಯಾ ಮತ್ತು ಅಣ್ಣ ಕೃಷ್ಣ ಇದು ನಮ್ಮ ನಾಯಕಿ ಕುಟುಂಬದ ಪರಿಚಯ.

## ಕಥೆ ಪ್ರಾರಂಭ

ವಿರಾಟ ಶ್ರೀಮಂತ ಹುಡುಗ, ಇನ್ನೂ ಕಾಲೇಜಿಗೆ ಹೋಗುತ್ತಾ ಇದ್ದ. ಇವನು ಎಲ್ಲರಿಗೂ ತುಂಬಾ ಆತ್ಮೀಯವಾಗಿ ಇರುತ್ತಿದ್ದ ಮತ್ತು ಸಹಾಯ ಮಾಡುತ್ತಿದ್ದ, ನಂಬಿದವರನ್ನು ಕೈ ಬಿಡುತ್ತಿರಲಿಲ್ಲ. ದೇವಸ್ಥಾನಕ್ಕೆ ಹೋದಾಗ ನಡೆಯೊಕ್ಕೆ ಆಗದೇ ಇರುವವರನ್ನು ಎತ್ತಿಕೊಂಡು ಹೋಗಿ ಒಳಗೆ ಬಿಡುವುದು ಮತ್ತು ಅನಾಥ ಮಕ್ಕಳನ್ನು ಕರೆದುಕೊಂಡು ಹೋಗಿ ಸ್ಕೂಲಿಗೆ ಸೇರಿಸುವುದು, ರಕ್ತ ದಾನವನ್ನು ಮಾಡುವುದು ಹೀಗೆ ಅನೇಕ ಕಾರ್ಯಗಳನ್ನು ಮಾಡುತ್ತಿದ್ದ. ಇದೇ ರೀತಿ ನಮ್ಮ ಸತಿ ಕೂಡಾ ಮಾಡುತ್ತಿದ್ದಳು. ಸತಿಗೆ ಯಾವಾಗಲೂ ಎಲ್ಲರೂ ಜಾಲ ಅಂತಾ ಕರಿತಾಯಿದ್ದರು. ಸತಿ ಅನ್ನೊ ಹೆಸರೇ ಮರೆತಿದ್ದರು ಹಾಗೇ ವಿರಾಟಗೂ ಅಂತರ್ ಅಂತಾ ಕರೆಯಿತಾಯಿದ್ದರು. ಅಂತರ್ ಮಾಡುವ ಒಳ್ಳೆಯ ಕಾರ್ಯವನ್ನು ನೋಡಿ ಜಾಲ ಆಕರ್ಷಣೆಗೆ ಒಳಗಾದಳು. ಜಾಲ ಮಾಡುವ ಒಳ್ಳೆಯ ಕಾರ್ಯಕ್ಕೆ ಅಂತರ್ ಆಕರ್ಷಣೆಗೆ ಒಳಗಾದನು. ಇದರಿಂದ ಒಬ್ಬರನ್ನೊಬ್ಬರು ಭೇಟಿಯಾಗಿ ಮಾತನಾಡಬೇಕೆಂದು ಒಂದು ಬದಿಯಲ್ಲಿ ಅವನು ಮತ್ತು ಮತ್ತೊಂದು ಬದಿಯಲ್ಲಿ ಅವಳು ಹೋಗುತ್ತಿರುತ್ತಾರೆ. ಇಬ್ಬರಿಗೂ ತಿಳಿದಿರುವುದಿಲ್ಲ. ಭೇಟಿಯಾಗಲು ಬರುತ್ತಿರುವುದು, ಹೇಗೆ ಮಾತನಾಡುವುದು ಎಂದು ಒದ್ದಾಡುತ್ತಿರುತ್ತಾರೆ. ಆಗ ಅವರಿಬ್ಬರ ಫ್ರೆಂಡ್ಸ್ ಬರುತ್ತಾರೆ. ಯಾಕೆ ನಡೀತಾ ಇದ್ದೀಯಾ ಅಂತಾ ಕರೆದುಕೊಂಡು ಹೋಗುತ್ತಾರೆ.

ಜಾಲ ಬೆಂಗಳೂರಿನಲ್ಲಿ ಅವರ ದೊಡ್ಡಪ್ಪನ ಮನೆಯಲ್ಲಿ ಇದ್ದು ಓದುತ್ತಿರುತ್ತಾಳೆ. ಅವರ ದೊಡ್ಡಪ್ಪನಿಗೆ ಮೂರು ಜನ ಮಕ್ಕಳು, ಮೂರು ಜನ ಸೊಸೆಯಂದಿರು, ಎರಡು ಮೊಮ್ಮಕ್ಕಳು



S.H.A.S. SAMITI'S K.S.J. ARTS & S.M.S. COMMERCE COLLEGE FOR WOMEN DHARWAD
Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

ತುಂಬಾ ಸಂತೋಷದ ಕುಟುಂಬ ಇವರದು. ಫೋನ ರೆಡಿ ಮಾಡುವ ಕಂಪನಿ . ಈ ಬಿಜಿನೆಸ್ ಮೂರು ಜನ ಮಕ್ಕಳು ಸೇರಿ ಮಾಡುತ್ತಿರುತ್ತಾರೆ. ಜಾಲ ತನಗಾಗುತ್ತಿರುವ ಅನುಭವ ಹೇಳಿಕೊಳ್ಳಲು ಒಂದು ನಂಬರಿಗೆ ಮೆಸೆಜ್ ಮಾಡುವಳು, ಫ್ರೆಂಡ ನನಗೆ ಒಂದು ಸಮಸ್ಯೆ ಇದೆ. ಪ್ಲೀಸ್ ಹೆಲ್ಪ ಮಿ ಅಂತಾ. ಆ ನಂಬರ ಅಂತರ್‌ದ್ದು ಆಗಿರುತ್ತದೆ. ಆದರೆ ಇಬ್ಬರಿಗೂ ತಿಳಿದಿಲ್ಲ. ಅವನು ಆಯಿತು ಹೇಳಿ ಅಂತಾ ಕೇಳಿದಾಗ ಇವಳು ತನಗಾದ ಆಕರ್ಷಣೆ ಹೇಳುವಳು. ಆಗ ಅವನು ಇದು ಲವ್ ಅಂತಾ ಹೇಳುತ್ತಾನೆ. ಹೀಗೆ ಮೆಸೆಜ್‌ನಲ್ಲಿ ಬೆಸ್ಟ್ ಫ್ರೆಂಡ್ ಆಗಿ ಇರುತ್ತಾರೆ. ನಂತರ ಮತ್ತೆ ಅಂತರ್ ಒಬ್ಬ ಅಜ್ಜಿಯನ್ನು ರೋಡ ದಾಟಿಸುತ್ತಾನೆ. ಅದೇ ವೇಳೆಯಲ್ಲಿ ಜಾಲ ಬರುತ್ತಿರುತ್ತಾಳೆ. ಆಗ ಅಲ್ಲಿ ಇಬ್ಬರು ಪರಿಚಯ ಆಗುವರು. ಅಲ್ಲಿಂದ ಅವರಿಬ್ಬರ ಲವ್ ಸ್ಟಾರ್ಟ್, ಎಲ್ಲರೂ "ಅಂತರ್‌ಜಾಲ" ಅನ್ನೊಕ್ಕೆ ಪ್ರಾರಂಭ ಮಾಡುತ್ತಾರೆ. ಒಂದು ದಿನ ಎಲ್ಲರೂ ಫ್ರೆಂಡ್ಸ್ ಸೇರಿ ಹೋಟೆಲ್‌ಗೆ ಹೋದಾಗ ಅಂತರ್ ಪ್ರೆಂಡ್ಸ್ ಕೇಳುತ್ತಾರೆ ಏಕೆ ನಿಮಗೆ ಜಾಲ ಅನ್ನುತ್ತಾರೆ? ಆಗ ಇವಳ ಫ್ರೆಂಡ್ ಹೇಳುತ್ತಾಳೆ ಯಾವಾಗಲೂ ಜೇಡರ ಜಾಲದಲ್ಲಿ ಸಿಕ್ಕಿರುವ ಹುಳುವಿನಂತೆ ಟೆನ್‌ಷನ್‌ನಲ್ಲಿ ಇರುತ್ತಾಳೆ. ಅದಕ್ಕೆ ಜಾಲ ಅನ್ನೊದು. ಮತ್ತು ನಿಮ್ಮ ಫ್ರೆಂಡ್‌ಗೆ ಅಂತರ್ ಯಾಕೆ ಅಂದಾಗ ಇವನ ಫ್ರೆಂಡ್ ಹೇಳುತ್ತಾನೆ ನಮ್ಮ ವಿರಾಟ ಚಿಕ್ಕವನಿದ್ದಾಗಿನಿಂದ ಮೇಲೆ ಅಂತರ ಮೇಲೆ ಇರುತ್ತಿದ್ದ. ಯಾವಾಗಲೂ ಅಂತರ ಮೇಲೆ ಕೂಡುತ್ತಿದ್ದ. ಅದಕ್ಕೆ ಆಗಿನಿಂದ ಅಂತರ್ ಅನ್ನುತ್ತೇವೆ. ಇಬ್ಬರಿಗೂ ಒಪ್ಪಿದೆ ಅಂತರ್‌ಜಾಲ.

ಜಾಲ ನೈಟ್ ಫೋನಿನಲ್ಲಿ ಫ್ರೆಂಡ್‌ಗೆ ಎಲ್ಲವನ್ನು ಹೇಳಬೇಕಾದರೆ ಹೋಟೆಲಲ್ಲಿ ನಡೆದಿರುವುದನ್ನು ಹೇಳುವುದು ಮರೆಯುತ್ತಾಳೆ. ಹಾಗಾಗಿ ನಾವೇ ವಿರಾಟ ಮತ್ತು ಸತಿ ಅಂತಾ ಗೊತ್ತಾಗಲ್ಲ. ವಿರಾಟ ಸತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಎಲ್ಲರನ್ನು ಪರಿಚಯ ಮಾಡುವನು. ಕುಟುಂಬದ ಫೋಟೋ ನೋಡಿ ಇವರು ಯಾರು ಅಂತಾ ಜಾಲ ವಿರಾಟ ತಾಯಿಗೆ ಕೇಳುತ್ತಾಳೆ. ಅವಳು ನನ್ನ ಮೊದಲನೆ ಮಗಳು. ಫೋನಿನಲ್ಲಿ ಮೆಸೆಜ್, ವಾಟ್ಸಅಫ್, ಫೇಸಬುಕ್ ಅಂತಾ ಚಂದ್ರಾ ಅನ್ನುವ ಹುಡುಗನ್ನ ಲವ್ ಮಾಡಿದಳು. ಆ ಹುಡಗನಿಗೆ ಆಗಲೇ ಮದುವೆ ಆಗಿರುವುದು ನಂತರ ತಿಳಿಯಿತು. ಅದೇ ಶಾಕ್‌ನಲ್ಲಿ ನಮ್ಮ ಮಗಳು ಆ ರೂಮಿಗೆ ಹೋದವಳು ಇನ್ನೂವರೆಗೂ ಆಚೆ ಬಂದಿಲ್ಲ. ಇದನ್ನು ಕೇಳಿ ತುಂಬಾ ಬೇಸರವಾಗಿ ಜಾಲ ಮನೆಗೆ ಹೋಗುವಳು. ಕೆಲವು ದಿನಗಳವರೆಗೆ ಲವ್ ನಡೆಯುವಾಗ ಹುಡುಗಿಗೆ ಒಂದು ಕಾಲ್ ಬರುತ್ತೆ, ಅದೇ ವೇಳೆಗೆ ತಾನು ಫೋನಿನಲ್ಲಿ ಚಾಟ್ ಮಾಡುತ್ತಿರುವುದು ಫ್ರೆಂಡ್ ಅಂತಾ ವಿರಾಟಗೆ ಗೊತ್ತಾಗುತ್ತೆ. ಆಗಲೇ ಅವನು ಊರಿಗೆ ಹೋಗುತ್ತಾಳೆ. ಫೋನ್, ಟಿ.ವಿ., ಕಂಪ್ಯೂಟರ್ ಎಲ್ಲಾ ಒಡೆದು ಹಾಕುತ್ತಾಳೆ. ಬೆಂಗಳೂರಿನಿಂದ ಅವರ ದೊಡ್ಡಪ್ಪನ ಬಿಸಿನೆಸ್ ಹಾಳಾಗಿ ಎಲ್ಲರೂ ಧಾರವಾಡಕ್ಕೆ ಹೋಗುತ್ತಾರೆ. ಭೂಮಿಯ ಉಳುಮೆ ಮಾಡುತ್ತಾ ಎಲ್ಲರೂ



Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

ಒಟ್ಟಾಗಿ ಇರುತ್ತಾರೆ. ವಿರಾಟ ಅವಳನ್ನು ಹುಡುಕುತ್ತಾ ಅವಳ ಮನೆಗೆ ಹೋದಾಗ ಅಲ್ಲಿ ಯಾರೂ ಇಲ್ಲದ್ದನ್ನು ಕಂಡು ಹುಡುಕಾಡಿ ಹುಡುಕಾಡಿ ಕೊನೆಗೆ ಅವಳು ಸಿಗದೇ ಇರುವುದಕ್ಕೆ ಬೇಜಾರಿನಲ್ಲಿ ಮರಳುತ್ತಾನೆ. ಅವನ ಫ್ರೆಂಡ್ ಒಂದು ದಿನ ಬಂದು ಹೇಳುತ್ತಾನೆ. ನಿನ್ನ ಹುಡುಗಿ ಧಾರವಾಡದಲ್ಲಿ ಇದ್ದಾಳೆ. ಅದನ್ನು ಕೇಳಿ ಖುಷಿಯಿಂದ ಐದು ಜನ ಫ್ರೆಂಡ್ಸ್ ಸೇರಿಕೊಂಡು ಧಾರವಾಡಕ್ಕೆ ಹೋಗುತ್ತಾರೆ ಅಲ್ಲಿ ಹೋಗಿ ಜಾಲ ಅವಳನ್ನು ಕಂಡು ಪ್ರೀತಿಯಿಂದ ಯಾಕೆ ನನಗೆ ಏನು ಹೇಳದೆ ಬಂದೆ ಅಂದಾಗ ಅವಳು ಅವನನ್ನು ನೋಡಿ ನೀವು ಯಾರು ನನಗೆ ಗೊತ್ತಿಲ್ಲ. ಹೀಗೆ ಮಾತನಾಡುವುದು ಸರಿಯಲ್ಲ ಅಂದು ಹೋಗುತ್ತಾಳೆ. ಏನಾಯಿತು ಇವಳಿಗೆ, ಯಾಕೆ ಹೀಗೆ ಹೇಳಿದಳು ಅಂತಾ ಯೋಚನೆ ಮಾಡುತ್ತಾ ಇರುವಾಗ ಇದನ್ನೆಲ್ಲಾ ನೋಡಿದ ಒಬ್ಬರು ಯಾಕೆ ಹೀಗೆ ಕೂತಿದ್ದೀರಾ ಎಂದು ಕೇಳಿದ, ಆ ಹುಡುಗಿಗೆ ನೀವು ಏನಾಗಬೇಕು, ಅವಳು ನಮ್ಮ ಮನೆ ಮುಂದೆ ಇರುವವಳು ಎಂದು ಹೇಳಿದಾಗ ವಿರಾಟ ಮತ್ತೆ ಖುಷಿಯಿಂದ ತನ್ನ ಲವ್ ಸ್ಟೋರಿ ಹೇಳುತ್ತಾನೆ. ಇದನ್ನೆಲ್ಲಾ ಕೇಳಿ ಮನೆಗೆ ಕರೆದುಕೊಂಡು ಹೋಗಿ ಊಟ ಮಾಡಲು ಹೇಳುತ್ತಾನೆ. ಆಮೇಲೆ ಅವರು ಜಾಲ ಹಾಗೇ ಮಾಡಲು ಒಂದು ಕಾರಣ ಇದೆ. ಅದು ಅವಳ ಅಕ್ಕ ವಿಜಯಾ ಅಂತಾ ಫೋನಿನಲ್ಲಿ ಯಾರದೋ ಜೊತೆ ದಿನ ಚಾಟಿಂಗ್, ಡೇಟಿಂಗ್ ಮಾಡುತ್ತಿದ್ದಳು ನಂತರ ಮೂರು ತಿಂಗಳ ಗರ್ಭಿಣಿ ಅಂತಾ ತಿಳಿದ ಮೇಲೆ ಅವನ ನಂಬರ ಸ್ವಿಚ್ ಆಫ್ ಆಯಿತು. ವಿಜಯಾಗೆ ಅವನ ನಂಬರ ಬಿಟ್ಟರೆ ಬೇರೆ ಏನೂ ಗೊತ್ತಿರಲಿಲ್ಲ. ಅದಕ್ಕೆ ನನ್ನ ಸಾವಿಗೆ ಫೋನ ಕಾರಣ ಅಂತಾ ಸತ್ತು ಹೋದಳು. ಅದೇ ಟೈಮ್‌ಗೆ ಅವಳ ಅಣ್ಣ ಕೂಡಾ ಫೋನಿನಲ್ಲಿ ಒಂದು ಹುಡುಗಿಯ ಜೊತೆ ಸಂಪರ್ಕದಲ್ಲಿ ಇದ್ದ ಅವಳು ತಾನು ದೊಡ್ಡ ಶ್ರೀಮಂತ ಹುಡಗಿ, ನೀನು ಹತ್ತು ಲಕ್ಷ ತೆಗೆದುಕೊಂಡು ಬಾ, ಒಂದು ಬಿಸಿನೆಸ್ ಮಾಡಲು ಸಹಾಯ ಮಾಡುತ್ತಿನಿ ಅಂತಾ ಹೇಳಿದಳು ಹತ್ತು ಲಕ್ಷ ತಗೊಂಡು ಹೋದವನು ಇನ್ನೂ ಮನೆಗೆ ಬಂದಿಲ್ಲ, ಎಲ್ಲಿ ಇರುವನು ಎಂಬುದು ತಿಳಿದಿಲ್ಲ. ಇನ್ನು ಇವರ ದೊಡ್ಡಪ್ಪನ ಕುಟುಂಬ ಬೀದಿಗೆ ಬಂತು, ಫೋನ ಕಂಪನಿ ಮುಚ್ಚಿ ಹೋಯಿತು. ಇದೆಲ್ಲಾ ಅವಳ ಮೇಲೆ ಬಹಳ ಪರಿಣಾಮ ಉಂಟಾಯಿತು. ಇನ್ನೊಂದು ಮುಖ್ಯ ಕಾರಣ ನೀನು ಫೋನಿನಲ್ಲಿ ಅವಳ ಫ್ರೆಂಡ್ ಆಗಿ ಎದುರಿನಲ್ಲಿ ಲವರ್ ಆಗಿ ನಡೆದುಕೊಂಡಿದ್ದು ಅವಳ ದುಃಖಕ್ಕೆ ಕಾರಣವಾಗಿದೆ ಎಂದು ಹೇಳಿದ. ಇಲ್ಲ ಸರ್ ನನಗೆ ಗೊತ್ತಾಗಿದ್ದು ಇವಾಗ ಅವಳೇ ನನ್ನ ಫೋನ ಫ್ರೆಂಡ್ ಅಂತಾ ಅಂದ ಅದಕ್ಕೆ ಅವರು ಆಗಿದ್ದು ಆಯಿತು ಇದು ಒಬ್ಬರಿಂದ ಒಬ್ಬರಿಗೆ ಪ್ರಚಾರ ಆಗಿ ಮಕ್ಕಳಿಗೆ ಫೋನ ಮತ್ತು ಕಂಪ್ಯೂಟರ್ Knowledge ಇಲ್ಲದ ಹಾಗೇ ಆಗಿದೆ. ಈಗಿನ ಮಕ್ಕಳಿಗೆ ಫೋನ, ಕಂಪ್ಯೂಟರ ಮತ್ತು ಅದರಲ್ಲಿ ಅಕೌಂಟ್ ಓಪನ್ ಮಾಡಲೇಬೇಕು. ಆದರೆ ಜನರು ಇವರ ಕುಟುಂಬ ಅನುಭವಿಸುತ್ತಿರುವ ದುಃಖಕ್ಕೆ ಹೆದರಿ ಫೋನ ಅಂದವರಿಗೆ ಕಾಲೇಜ ಹೋಗವುದೇ ಬೇಡ ಅಂತಿದ್ದಾರೆ. ಏನು

S.H.A.S. SAMITI'S
K.S.J. ARTS & S.M.S. COMMERCE COLLEGE FOR WOMEN
DHARWAD

Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Com.
College for Women, Dharwad

5

ಮಾಡುವುದು ಇದನ್ನೆಲ್ಲಾ ಹೇಗೆ ಸರಿ ಮಾಡುವುದು ಅಂತಾ ಬೇಸರವಾಗಿ ಹೇಳಿದ. ಅಂತರ್ ಇದನ್ನೆಲ್ಲಾ ಕೇಳಿ ಸರ್ ನಾನು ಸರಿ ಮಾಡುತ್ತೇನೆ. ನನಗೆ ಇರಲು ವ್ಯವಸ್ಥೆ ಮಾಡಿ ಅಂತಾ ಕೇಳಿದ. ಆಯಿತು ಮೇಲಿನ ಮನೆಯಲ್ಲಿ ಇರುವಂತಾ ಹೇಳಿದರು.

ಮರುದಿನ ತನ್ನ ಕಾರ್ಯವನ್ನು ಪ್ರಾರಂಭಿಸಿದನು. ಭೂಮಿ ಉಳುವವರಿಗೆ ಮಣ್ಣಿನ ಪರೀಕ್ಷೆ ಮಾಡಿಸುವುದು ಎಲ್ಲರನ್ನು ಒಟ್ಟಾಗಿ ಸೇರಿಸಿ ಕಂಪ್ಯೂಟರ್ ಬಗ್ಗೆ ಮಾಹಿತಿ ನೀಡುವುದು, ಅನೇಕ ಮಷಿನ್ಸ್ ತರಿಸುವುದು, ಕೃಷಿಯ ಬಗ್ಗೆ ಫೋನಿನಲ್ಲಿ ಮಾಹಿತಿ ಪಡೆಯುವುದು ಇರುವಲ್ಲಿಂದ ಕರೆಂಟ್ ಬಿಲ್, ವಾಟರ್ ಬಿಲ್, ಗ್ಯಾಸ ಬಿಲ್ ಕಟ್ಟುವುದು ಹೇಗೆ ಎಂದು ತಿಳಿಸಿಕೊಟ್ಟ ಮತ್ತು ಚಿಕ್ಕ ಮಕ್ಕಳಿಗೆ ಜ್ಞಾನದ ಬಗ್ಗೆ ಡಿಕ್ಷನರಿ ಫೋನಿನಲ್ಲಿ ತಿಳಿಸಿಕೊಟ್ಟ, ಮತ್ತು ಅಕೌಂಟ್ಸ್, ಇ-ಮೇಲ್, ಜಿ-ಮೇಲ್ ಓಪನ್ ಮಾಡುವುದು ತಿಳಿಸಿದ. ಇದನ್ನೆಲ್ಲಾ ನೋಡುತ್ತಿದ್ದ ಸತಿ ಕುಟುಂಬ ಬಹಳ ಕೋಪದಿಂದ ಇರುತ್ತಿದ್ದರು. ಕೆಲವೇ ದಿನಗಳಲ್ಲಿ ಅಲ್ಲಿಯ ಜನರು ಬಹು ಬೇಗ ಅಂತರಜಾಲಕ್ಕೆ ಹೊಂದಿಕೊಂಡು ಬೆಳವಣಿಗೆ ಕಂಡರು. ಹಾಗೇ ಅಲ್ಲಿಯೇ ಒಂದು ಕಂಪ್ಯೂಟರ್ ಪಾರ್ಟ್ಸ ಮತ್ತು ಲ್ಯಾಪಟಾಪ್ ತಯಾರಿಸುವ ಕಂಪನಿ ತೆರೆದ. ನಿರುದ್ಯೋಗಿಗಳಿಗೆ ಕೆಲಸ ಕೊಟ್ಟ, ಆ ಕಂಪನಿಗೆ ಸತಿ ದೊಡ್ಡಪ್ಪನ ಮೂರು ಮಕ್ಕಳು ಹೋಗಲು ಪ್ರಾರಂಭಿಸಿದರು. ಒಬ್ಬರು ಮಾಡಿರುವ ತಪ್ಪಿಗೆ ಇಡೀ ದೇಶಕ್ಕೆ ಕೆಟ್ಟ ಮೆಸೆಜ್ ಕೊಡುವುದು ತಪ್ಪು ಅಂತಾ ಅಂದುಕೊಂಡರು.

ಕಂಪ್ಯೂಟರ್, ಲ್ಯಾಪಟಾಪ್, ಫೋನ್ ಇವೆಲ್ಲದರಿಂದ ಹುಡುಗಿಯರಿಗೆ ರಕ್ಷಣೆಯಾಯಿತು. ತಂದೆ-ತಾಯಂದಿಯರು ಚಿಂತೆ ಮಾಡುವುದು ಬಿಟ್ಟರು. ದೇಶದಲ್ಲಿ ನಿರುದ್ಯೋಗ ಕಡಿಮೆಯಾಯಿತು ಮತ್ತು ಕೃಷಿಯಲ್ಲಿ ಬೆಳವಣಿಗೆಯಾಯಿತು. ಒಂದು ಜಾಲದಿಂದ ಏನೆಲ್ಲಾ ಸಹಾಯ ಸಿಗುತ್ತದೆ. ರಾಷ್ಟ್ರದ ಆದಾಯ ಹೆಚ್ಚಿತು. ಹಣದ ಮೌಲ್ಯ ಏರಿತು. ರಾಜ್ಯದಿಂದ ರಾಜ್ಯಕ್ಕೆ ಹರಡಿತು. ಅಂತರ್‌ಜಾಲದಲ್ಲಿ ಜಗತ್ತು ಅತೀ ಚಿಕ್ಕದು ಎನಿಸಿತು. ವಿಷಯಗಳು ಬೆಳೆಯತೊಡಗಿದವು. ಜನರಿಗೆ ಚಿಕ್ಕ ಚಿಕ್ಕ ವಿಷಯಕ್ಕೆ ಬೈಕ್, ಕಾರ ತೆಗೆದುಕೊಂಡು ಹೋಗುವುದು ತಪ್ಪಿತು. ಇದರಿಂದ ಪೆಟ್ರೋಲ, ಡಿಸೇಲ್ ಹಾಗು ಸಮಯ ಉಳಿಯಿತು. ಶಬ್ದ ಮಾಲಿನ್ಯ, ಹವಾಮಾನ ಹಾಳಾಗುವುದನ್ನು ತಡೆಗಟ್ಟಲು ಸಾಧ್ಯವಾಯಿತು. ಇದೆಲ್ಲ ಜನರಿಗೆ ತಿಳಿಯಿತು ಮತ್ತು ತಿಳಿಸಿಕೊಟ್ಟನು. ಇದನ್ನೆಲ್ಲಾ ನೋಡಿದ ಜಾಲನ ತಂದೆ ನಮ್ಮನ್ನು ಕ್ಷಮಿಸು ಅಂತರಜಾಲ ಒಳ್ಳೆಯದೇ, ನನ್ನ ಮಗ ಮತ್ತು ಮಗಳು ಮಾಡಿದ ತಪ್ಪಿಗೆ ನಾನು ಎಷ್ಟು ಜನರಿಗೆ ದುಃಖ ಕೊಟ್ಟೆ ಮತ್ತೇ ಅವರ ಫೋನ ತೆಗೆದು ಬಿಸಾಕಿದೆ ಅಂತ ಕೇಳಿದ. ಇರಲಿ ಬಿಡಿ ಎಲ್ಲರೂ ತಪ್ಪು ಮಾಡುವುದು ಸಹಜ. ಬೇಜಾರು ಆಗಬೇಡಿ ಅಂತಾ ಹೇಳಿದ. ಮತ್ತೇ ಜಾಲ ಇವನನ್ನು ಪ್ರೀತಿಸಿ ತೊಡಗಿದಳು. ಇವಳ ಅಣ್ಣ ಕೃಷ್ಣನನ್ನು ಇದೇ ಅಂತರಜಾಲದ ಮೂಲಕ ಕಂಡು ಹಿಡಿದು ಮನೆಗೆ



Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad
S.H.A.S. SAMITI'S K.S.J. ARTS & S.M.S. COMMERCE COLLEGE FOR WOMEN DHARWAD

ಕರೆದುಕೊಂಡು ಬಂದ. ಮತ್ತು ಅವನಿಗೆ ತನ್ನ ತಪ್ಪಿನ ಅರಿವಾಗಿ ಎಲ್ಲ ಮರೆತು ಕಂಪ್ಯೂಟರ್ ಕ್ಲಾಸ ತೆರೆದು ಹಲವಾರು ಮಕ್ಕಳಿಗೆ ಮತ್ತು ಮಹಿಳೆಯರಿಗೆ ಅಂತರ್‌ಜಾಲದ ಮಾಹಿತಿ ನೀಡತೊಡಗಿದ. ಟೈಪಿಂಗ್ ಕಲಿಸಿಕೊಟ್ಟ. ಇದೆಲ್ಲಾ ನಡೆದಿರುವಾಗ ಅಂತರ್ ತಂದೆ, ತಾಯಿ, ಅಜ್ಜ ಸತಿ ಮನೆಗೆ ಬಂದು ಹೆಣ್ಣು ಕೇಳಿದರು. ಎಲ್ಲರೂ ಒಪ್ಪಿದರು. ಮದುವೆ ನಿಶ್ಚಯವಾಯಿತು. ಒಂದು ದಿನ ಅಂತರ್‌ಜಾಲ ಇಬ್ಬರೂ ಮಾತನಾಡುವಾಗ ಜಾಲ ಕೇಳಿದಳು ಯಾಕೆ ಫ್ರೆಂಡ ಅಂತಾ ಫೋನಿನಲ್ಲಿ ಚಾಟ್ ಮಾಡಿದೆ ಅಂದಾಗ ನನಗೆ ನೀನೇ ಅದು ಅಂತಾ ಗೊತ್ತಾಗಿದ್ದು ಇಲ್ಲಿ ಬಂದ ನಂತರ ನಿಮ್ಮ ಮನೆಯ ಮುಂದಿರುವವರು ಹೇಳಿದಾಗ.

ದೇಶದ ಅಭಿವೃದ್ಧಿಯನ್ನು ಕಂಡ ಮೋದಿ ಅವರು ಅತೀ ಖುಷಿಯಿಂದ ತಮ್ಮ ಧನ್ಯವಾದಗಳನ್ನು ತಿಳಿಸಿದರು ಮತ್ತು ಅವರು ಇಂತಹ ತರುಣರಿಂದ ನನ್ನ ಕನಸು "Make in India" ಆಗುವುದು ನಿಜವಾಗುತ್ತದೆ. ಎಲ್ಲ ಯುವಜನರು ಹೀಗೆ ದೇಶಕ್ಕಾಗಿ ದುಡಿಯಬೇಕು ಅಂತಾ ಹೇಳಿದರು. ದೇಶದ ಅಭಿವೃದ್ಧಿ ಕಂಡು ಎಲ್ಲರೂ ಸನ್ಮಾನಿಸಿದರು. ಇದರಿಂದ **"ಸಾಪ್ಟವೇರ್ ಸ್ಟೇಟ್ ಕರ್ನಾಟಕ"** ಆಯಿತು ಮತ್ತು ನಂತರ ನಾಲ್ಕು ಮದುವೆಗಳು ನಡೆದವು.

1) ವೃಂದಾ ಜೊತೆ ಜಲಂಧರ
2) ಕೃಷ್ಣಾ ಜೊತೆ ರಾಧಾ
3) ರೇವತಿ ಜೊತೆ ಚಂದ್ರಕಾಂತ
4) ಅಂತರ್ ಜೊತೆ ಜಾಲ

ಮುಕ್ತಾಯ


| | | |
|---|---|---|
| Name | : | **Sonu R. Badiger** |
| Study | : | B, Com 3rd year |
| Address | : | At post : Itagi,<br>Tq : Khanapur<br>Dist : Belgaum |
| Pin Code | : | 591112 |
| College | : | KS Jigalur Woman's College, Dharwad |
| Phone No. | : | 7353578381 |


ಪ್ರಾಚಾರ್ಯರು,
ಶ್ರೀ ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿಯ
ಶ್ರೀಮತಿ ಕ. ಶಿ. ಜಿಗಳೂರ ಕಲಾ ಹಾಗೂ
ಡಾ|| (ಶ್ರೀಮತಿ) ಸು. ಮ. ಶೇಷಗಿರಿ ವಾಣಿಜ್ಯ
Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

S.H.A.S. SAMITI'S K.S.J. ARTS & S.M.S. COMMERCE COLLEGE FOR WOMEN DHARWAD






ಪ್ರಾಚಾರ್ಯರು,
ಶ್ರೀ ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿಯ
ಶ್ರೀಮತಿ ಕ. ಶಿ. ಜಿಗಳೂರ ಕಲಾ ಹಾಗೂ
ಡಾ|| (ಶ್ರೀಮತಿ) ಸು. ಮು. ಶೇಷಗಿರಿ ವಾಣಿಜ್ಯ
ಮಹಿಳಾ ಮಹಾವಿದ್ಯಾಲಯ. ಧಾರವಾಡ

S.H.A.S. SAMITI'S K.S.J. ARTS & S.M.S. COMMERCE COLLEGE FOR WOMEN DHARWAD

Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

# ಸೂಚನೆ

ದಿ. 12/7/2017 8

ಈ ಮೂಲಕ ಮಹಾವಿದ್ಯಾಲಯದ ಎಲ್ಲ ವಿದ್ಯಾರ್ಥಿನಿಯರಿಗೆ ತಿಳಿಸುವುದೇನೆಂದರೆ, "ಅನಿಕೇತನ ವೆಬ್ ಮ್ಯಾಗಜಿನ್" ಬೆಂಗಳೂರು ಇವರು ಯುಗಾದಿ ಕಥಾ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಬಯಸುವ ವಿದ್ಯಾರ್ಥಿನಿಯರು ದಿನಾಂಕ 12/08/2017 ರೊಳಗಾಗಿ ಶ್ರೀಮತಿ. ಶಕುಂತಲಾ. ಬರಗಾರ ಇವರ ಹತ್ತಿರ ತಮ್ಮ ಕಥೆಗಳನ್ನು ಬರೆದು ಕೊಡಬೇಕು.

ವಿಷಯ : ಸಾಮಾಜಿಕ ಜಾಲತಾಣಗಳಲ್ಲಿ ಜನರ ವರ್ತನೆಗಳು

ಬಹುಮಾನಗಳು : ಮೊದಲ ಬಹುಮಾನ – 10,000/-
ಎರಡನೆಯ ಬಹುಮಾನ – 7,500/-
ಮೂರನೆಯ ಬಹುಮಾನ – 5,000/-

ನಿಯಮಗಳು :
1) ಕಥೆಗಳನ್ನು ಅಂದವಾಗಿ ಬರೆದು ನುಡಿ ಇಲ್ಲವೆ ಯುನಿಕೋಡ್ ಬರಹಗಳಲ್ಲಿ ಟೈಪ್ ಮಾಡಿ ಮೇಲ್ ಮೂಲಕ ಕಳುಹಿಸಬಹುದು
2) ವಿದ್ಯಾರ್ಥಿಗಳು ತಮ್ಮ ಕಥೆಗಳ ಜೊತೆಗೆ ಕಾಲೇಜಿನ ಗುರುತಿನ ಚೀಟಿ ಮತ್ತು ಭಾವಚಿತ್ರವನ್ನು ಕಳುಹಿಸಿಕೊಡಬೇಕು.
3) ಕಥೆಗಳು ಈ ಮೊದಲು ಎಲ್ಲೂ ಪ್ರಕಟವಾಗಿರಬಾರದು
4) ಪದ ಮಿತಿ [illegible] ಮೀರದಂತೆ ಇರಲಿ
5) ಆಯ್ಕೆಯಾದ ಕಥೆಗಳನ್ನು www.aniketana.org ದಲ್ಲಿ ಪ್ರಕಟಿಸಲಾಗುವುದು.

(ಸಹಿ)
(ಶ್ರೀಮತಿ. ಶಕುಂತಲಾ. ಬರಗಾರ)
ಸಂಚಾಲಕರು
ಕನ್ನಡ ವಿಭಾಗ

S.H.A.S. SAMITI'S K.S.J. ARTS & S.M.S. COMMERCE COLLEGE FOR WOMEN DHARWAD

(ಸಹಿ) 12/7

ಪ್ರಾಚಾರ್ಯರು,
ಶ್ರೀ ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿಯ
ಶ್ರೀಮತಿ ಕ. ಶಿ. ಜಿಗಳೂರ ಕಲಾ ಹಾಗೂ
ಡಾ|| (ಶ್ರೀಮತಿ) ಸು. ಮು. ಶೇಷಗಿರಿ ವಾಣಿಜ್ಯ
ಮಹಿಳಾ ಮಹಾವಿದ್ಯಾಲಯ, ಧಾರವಾಡ

(signature)
Principal
S.H.A.S. Samiti's
Smt. K. S. Jigalur Arts and
Dr. (Smt) S. M. Sheshgiri Commerce
College for Women, Dharwad

# ಅನಿಕೇತನ

ನಿರಿಗಂತವಾಗಿ ಏರು

www.aniketana.org




ಸಾಮಾಜಿಕ ಜಾಲತಾಣಗಳಲ್ಲಿ ಜನಪರ ವಿಚಾರಗಳನ್ನು ಪ್ರಚಾರ ಮಾಡುವ ಮೂಲಕ ಉತ್ತಮ ಮನಸ್ಸುಗಳನ್ನು ರೂಪಿಸುವ ಉದ್ದೇಶದಿಂದ ಹುಟ್ಟಿಕೊಂಡಿರುವುದೇ ಅನಿಕೇತನ ವೆಬ್ ಮ್ಯಾಗಜಿನ್. ಇದು ಇನ್ನಷ್ಟು ಕ್ರಿಯಾಶೀಲವಾಗಿ ಜನರ ಜೊತೆಗೆ ಒಗ್ಗೂಡುವ ಆಶಯದಿಂದ ಕಾಲೇಜು ವಿದ್ಯಾರ್ಥಿಗಳಿಗೆ ಕಥಾ ಸ್ಪರ್ಧೆಯನ್ನು ಏರ್ಪಡಿಸಿದೆ. ಆ ಮೂಲಕ ವಿದ್ಯಾರ್ಥಿಗಳಲ್ಲಿರುವ ಸೃಜನಶೀಲ ಪ್ರತಿಭೆಯನ್ನು ಪೋಷಿಸುವುದು ಇಲ್ಲಿನ ಉದ್ದೇಶ.

ಪ್ರೋತ್ಸಾಹದಾಯಕ ನಗದು ಬಹುಮಾನ

ಮೊದಲ ಬಹುಮಾನ – 10,000/–

ಎರಡನೆಯ ಬಹುಮಾನ – 7,500/–

ಮೂರನೆಯ ಬಹುಮಾನ – 5,000/–

## ನಿಯಮಗಳು:

- ಪದವಿ ಪೂರ್ವ, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು.
- ವಿದ್ಯಾರ್ಥಿಗಳು ತಮ್ಮ ಕಥೆಗಳ ಜೊತೆಗೆ ಕಾಲೇಜಿನ ಪರಿಚಯಪತ್ರ ಮತ್ತು ಭಾವಚಿತ್ರವನ್ನು ಕಳುಹಿಸಿಕೊಡಬೇಕು.
- ಕಥೆಗಳನ್ನು ಅಂದವಾಗಿ ಬರೆದು ನುಡಿ ಇಲ್ಲವೇ ಯುನಿಕೋಡ್ ಬರಹಗಳಲ್ಲಿ ಟೈಪುಮಾಡಿ ಮೈಲ್ ಮೂಲಕ ಕಳುಹಿಸಬಹುದು. (*aniketana15@gmail.com, aniketana.org@gmail.com*
- ಕಥೆಗಳು ಈ ಮೊದಲು ಎಲ್ಲೂ ಪ್ರಕಟವಾಗಿರಬಾರದು.
- ಮೌಲ್ಯಮಾಪಕರ ತೀರ್ಮಾನವೆ ಅಂತಿಮ.
- ಉತ್ತಮ ಕಥೆಗಳನ್ನು *www.aniketana.org* ದಲ್ಲಿ ಪ್ರಕಟಿಸಲಾಗುವುದು.

**ಕಥೆಗಳನ್ನು ಆಗಸ್ಟ್ 16, 2017ರ ಒಳಗಾಗಿ ಕಳುಹಿಸಬೇಕು**

Debate Section
Smt S.S. Biradar
Principal
S.H.A.S. Samiti's
Smt. K. S. Jigalur Arts and
... S. M. Sheshgiri Commerce

ಕಥೆಗಳನ್ನು ಕಳಿಸಬೇಕಾದ ವಿಳಾಸ: ರಂಗನಾಥ ಕಂಟನಕುಂಟೆ, ಅನಿಕೇತನ ವೆಬ್‌ಮ್ಯಾಗಜೈನ್, #30, 1ನೇ ಹಾಸ್, ಜಿ.ಕೆ.ಡಬ್ಲೂ. ಲೇಔಟ್